**ಕರ್ನಾಟಕ ಸರ್ಕಾರದ ನಡವಳಿಗಳು**

ವಿಷಯ:- ಬಾಗಲಕೋಟೆ ಜಿಲ್ಲೆ, ಮುಧೋಳ ತಾಲ್ಲೂಕಿನ ಮೆಟಗುಡ್ಡ ಮತ್ತು ಇತರೆ 07 ಗ್ರಾಮಗಳು ಹಾಗೂ ನಾಗರಾಳ ಮತ್ತು ಇತರೆ 05 ಗ್ರಾಮಗಳ ಬಹುಗ್ರಾಮ ಕುಡಿಯುವ ನೀರಿನ ಯೋಜನೆ ಪೂರ್ಣಗೊಂಡ ನಂತರವು ನೀರು ಸರಬರಾಜು ಮಾಡಲು ಸಾಧ್ಯವಾಗದೆ ಲೋಪವೆಸಗಿರುವ ಅಧಿಕಾರಿ / ನೌಕರರುಗಳ ವಿರುದ್ಧ ಕ್ರಮ - ಸೇವೆಯಿಂದ ಅಮಾನತ್ತುಪಡಿಸುವ ಬಗ್ಗೆ - ಆದೇಶ.

ಓದಲಾಗಿದೆ:- ಆಯುಕ್ತರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಬೆಂಗಳೂರು ಇವರ ಪತ್ರ ಸಂಖ್ಯೆ: ಗ್ರಾ.ಕು.ನೀ.&ನೈ.ಇ/340/ಮುಇಂ/ಆ-1/ಶಿಸ್ತುಕ್ರ/2019/2087, ದಿನಾಂಕ: 22.11.2019

*****

**ಪ್ರಸ್ತಾವನೆ:**

ಆಯುಕ್ತರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಬೆಂಗಳೂರು ಇವರು ಮೇಲೆ ಓದಲಾದ ದಿ:22.11.2019ರ ಪತ್ರದ ಜೊತೆ ಬಾಗಲಕೋಟೆ ಜಿಲ್ಲೆ, ಮುಧೋಳ ತಾಲ್ಲೂಕಿನ ಮೆಟಗುಡ್ಡ ಮತ್ತು ಇತರೆ 07 ಗ್ರಾಮಗಳು ಮತ್ತು ನಾಗರಾಳ ಮತ್ತು ಇತರೆ 05 ಗ್ರಾಮಗಳಿಗೆ ಕೈಗೊಳ್ಳಲಾದ ಬಹುಗ್ರಾಮ ಕುಡಿಯುವ ನೀರಿನ ಸರಬರಾಜು ಯೋಜನೆಯು ಸಫಲವಾಗದೇ ಸದರಿ ಗ್ರಾಮಗಳ ಜನರು ಕುಡಿಯುವ ನೀರು ಸರಬರಾಜುವಿನಿಂದ ವಂಚಿತರಾಗಿದ್ದು, ಸದರಿ ಯೋಜನೆಗಳಿಗೆ ಖರ್ಚು ಮಾಡಲಾದ ಬೃಹತ್ ಪ್ರಮಾಣದ ವೆಚ್ಚವು ನಿರರ್ಥಕವಾಗಿದ್ದು, ಸರ್ಕಾರಕ್ಕೆ ಆರ್ಥಿಕ ನಷ್ಟ ಉಂಟಾಗಲು ಕಾರಣರಾಗಿರುವ ಈ ಕೆಳಕಂಡ ಆಪಾದಿತ ಅಧಿಕಾರಿ / ನೌಕರರುಗಳ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳುವಂತೆ ಕೋರಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ:-

1. ಶ್ರೀ ಎಂ.ಹೆಚ್.ಗೌಡರ್, ಅಂದಿನ ಕಾರ್ಯಪಾಲಕ ಇಂಜಿನಿಯರ್, ಪಂ.ರಾ.ಇಂ.ವಿಭಾಗ, ಬಾಗಲಕೋಟೆ (ಹಾಲಿ ನಿವೃತ್ತ)
2. ಶ್ರೀ ಬಿ.ಪಿ.ಕೆಂಗನಾಳ, ಅಂದಿನ ಕಾರ್ಯಪಾಲಕ ಇಂಜಿನಿಯರ್, ಪಂ.ರಾ.ಇಂ.ವಿಭಾಗ, ಬಾಗಲಕೋಟೆ (ಹಾಲಿ ನಿವೃತ್ತ)
3. ಶ್ರೀ ವಿಜಯಕುಮಾರ್, ಅಂದಿನ ಕಾರ್ಯಪಾಲಕ ಇಂಜಿನಿಯರ್, ಪಂ.ರಾ.ಇಂ.ವಿಭಾಗ, ಬಾಗಲಕೋಟೆ (ಹಾಲಿ ನಿವೃತ್ತ)
4. ಶ್ರೀ ಎಸ್.ಆರ್.ಕೊಪ್ಪದ, ಹಿಂದಿನ ಕಾ.ಇಂ. (ಹಾಲಿ ನಿವೃತ್ತ), ಪಂ.ರಾ.ಇಂ.ವಿಭಾಗ, ಬಾಗಲಕೋಟೆ
5. ಶ್ರೀ ಮಂದೋಲಿ ಮನೋಹರ ಶಂಕರಪ್ಪ, ಅಂದಿನ ಕಾರ್ಯಪಾಲಕ ಇಂಜಿನಿಯರ್, ಪಂ.ರಾ.ಇಂ.ವಿಭಾಗ, ಬಾಗಲಕೋಟೆ
6. ಶ್ರೀ ಸುರೇಂದ್ರ ದೊಡ್ಡಮನಿ, ಅಂದಿನ ಸ.ಕಾ.ಇಂ., ಪಂ.ರಾ.ಇಂ.ಉಪ ವಿಭಾಗ, ಮುಧೋಳ
7. ಶ್ರೀ ಸಿ.ಬಿ.ಮಿಂಚಿನಾಳ ಅಂದಿನ ಸ.ಕಾ.ಇಂ., ಪಂ.ರಾ.ಇಂ.ಉಪ ವಿಭಾಗ, ಮುಧೋಳ
8. ಶ್ರೀ ಎಸ್.ಜಿ.ಭೋಸಲೆ, ಹಿಂದಿನ ಕಿ.ಇಂ., ಪಂ.ರಾ.ಇಂ.ಉಪ ವಿಭಾಗ, ಮುಧೋಳ
9. ಶ್ರೀ ಜಿ.ಬಿ.ಕರ್ನಾಳ, ಕಿ.ಇಂ., ಪಂ.ರಾ.ಇಂ.ಉಪ ವಿಭಾಗ, ಮುಧೋಳ
10. ಶ್ರೀ ಎಂ.ಆರ್.ಹುರಕಡ್ಲಿ, ಹಿಂದಿನ ಲೆಕ್ಕಪರಿಶೋಧನಾಧಿಕಾರಿ (ಹಾಲಿ ನಿವೃತ್ತ) ಪಂ.ರಾ.ಇಂ ವಿಭಾಗ, ಬಾಗಲಕೋಟೆ

11. ಶ್ರೀ ಜಿ.ಬಿ.ಕರ್ಜಗಿ, ಹಿಂದಿನ ಲೆಕ್ಕಪರಿಶೋಧನಾಧಿಕಾರಿ (ಹಾಲಿ ನಿವೃತ್ತ) ಪಂ.ರಾ.ಇಂ ವಿಭಾಗ, ಬಾಗಲಕೋಟೆ
12. ಶ್ರೀ ಎಂ.ಹೆಚ್.ಕರದೇಗೌಡ, ಪ್ರಥಮ ದರ್ಜೆ ಲೆಕ್ಕ ಸಹಾಯಕ,
13. ಶ್ರೀ ಎನ್.ಸಿ.ಕೊಡಗಲಿ, ದ್ವಿತೀಯ ದರ್ಜೆ ಲೆಕ್ಕ ಸಹಾಯಕ,

ಸರ್ಕಾರವು ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿರುತ್ತದೆ. ಬಾಗಲಕೋಟೆ ಜಿಲ್ಲೆ ಮುಧೋಳ ತಾಲ್ಲೂಕಿನ ಮೇಟಗುಡ್ಡ ಹಾಗೂ ಇತರ 07 ಗ್ರಾಮಗಳ ಬಹುಗ್ರಾಮ ಕುಡಿಯುವ ನೀರಿನ ಸರಬರಾಜು ಯೋಜನೆ ಕಾಮಗಾರಿಯನ್ನು 2007-08 ರಿಂದ ಪ್ರಾರಂಭವಾಗಿ 2012 ನೇ ಸಾಲಿನಲ್ಲಿ ಪೂರ್ಣಗೊಂಡಿರುತ್ತದೆ. ಕಾಮಗಾರಿ ಪೂರ್ಣಗೊಳಿಸಲು ಗುತ್ತಿಗೆದಾರರಿಗೆ 11 ತಿಂಗಳ ಕಾಲಾವಕಾಶವನ್ನು ನೀಡಲಾಗಿದ್ದು, ಗುತ್ತಿಗೆದಾರರು ಸುದೀರ್ಘವಾಗಿ ವಿಳಂಬಿಸಿದ್ದರೂ ಸಹ ಈ ಸಂಬಂಧ ವಿಭಾಗ / ಉಪವಿಭಾಗ ಕಛೇರಿಯ ಅಧಿಕಾರಿ / ನೌಕರರುಗಳು ಸದರಿ ಗುತ್ತಿಗೆದಾರರ ವಿರುದ್ಧ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ.

ಮುಂದುವರೆದು, ಕಾಮಗಾರಿಯ ಅಂದಾಜು ಪತ್ರಿಕೆ ತಯಾರಿಸಿದ ಅಧಿಕಾರಿಗಳು ಸದರಿ ಕುಡಿಯುವ ನೀರಿನ ಯೋಜನೆಗೆ ಸಣ್ಣ ನೀರಾವರಿ ಇಲಾಖೆಯ ಕೆರೆಯ ನೀರನ್ನು ಜಲಮೂಲವನ್ನಾಗಿ ಪರಿಗಣಿಸಿದ್ದು, ಸದರಿ ಕೆರೆಗೆ ಬೇಕಾಗುವಷ್ಟು ಸಂಗ್ರಹವಾಗುವ ಬಗ್ಗೆ ಹಾಗೂ ಈ ಹಿಂದೆ ಕೆರೆಯಲ್ಲಿ ನೀರು ಸಂಗ್ರಹವಾದ ಬಗ್ಗೆ ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಿರುವುದಿಲ್ಲ. ಜೊತೆಗೆ ಸದರಿ ಕಾಮಗಾರಿಯ ಅಂದಾಜು ಪಟ್ಟಿ ಅನುಮೋದಿಸಿದ ಹಾಗೂ ಕಾಮಗಾರಿ ಅನುಷ್ಠಾನಗೊಳಿಸಿದ ವಿವಿಧ ಅಧಿಕಾರಿಗಳು ಸಹ ನೀರು ಸಂಗ್ರಹಣೆ ಕುರಿತಂತೆ ಯಾವುದೇ ಪರಿಶೀಲನೆ ನಡೆಸದೆ ಕಾಮಗಾರಿ ಅನುಷ್ಠಾನಗೊಳಿಸಿರುತ್ತಾರೆ. ಈ ಯೋಜನೆಗಾಗಿ ಒಟ್ಟಾರೆ 3,98,03,046/- ರೂ.ಗಳ ಹಣ ವೆಚ್ಚವಾಗಿದ್ದು, ಬಹುಗ್ರಾಮ ಕುಡಿಯುವ ನೀರಿನ ಯೋಜನೆಯಡಿ 07 ಗ್ರಾಮಗಳಿಗೆ ಕುಡಿಯುವ ನೀರು ಸರಬರಾಜು ಮಾಡಲು ಸಾಧ್ಯವಾಗದೆ ಅನುಷ್ಠಾನಗೊಂಡ ಯೋಜನೆಯು ಬಳಕೆಯಲ್ಲಿಲ್ಲದಂತಾಗಿ ಸದರಿ ಕಾಮಗಾರಿಗೆ ಮಾಡಿರುವ ವೆಚ್ಚವು ನಿರರ್ಥಕವಾಗಿರುತ್ತದೆ.

ಈ ಕಾಮಗಾರಿಯ ಅನುಷ್ಠಾನಗೊಳಿಸಿದ ಅಧಿಕಾರಿಗಳು ಹಾಗೂ 2008 ರಿಂದ 2011 ರವರೆಗೆ ಹಂತ ಹಂತವಾಗಿ ಬಿಲ್ಲುಗಳನ್ನು ಪಾವತಿಸಿದ ಅಧಿಕಾರಿಗಳು ಜಲಮೂಲವೆಂದು ಪರಿಗಣಿಸಿದ ಸಣ್ಣ ನೀರಾವರಿ ಇಲಾಖೆಯ ಕೆರೆಗೆ ಮಳೆಯಿಂದಾಗಲೀ ಅಥವಾ ನೀರಾವರಿ ಕಾಲುವೆಯಿಂದಾಗಲೀ ನೀರು ಶೇಖರಣೆಯಾಗುವ ಬಗ್ಗೆ ಪರಿಶೀಲಿಸಿ ವಾಸ್ತವ ಸ್ಥಿತಿಗತಿಯ ಬಗ್ಗೆ ಮೇಲಾಧಿಕಾರಿಗಳ ಗಮನಕ್ಕೆ ತರಬಹುದಾಗಿತ್ತು. ಅಲ್ಲದೆ ಈ ಅವಧಿಯಲ್ಲಿ ಅನೇಕ ಮಾಸಿಕ ಪ್ರಗತಿ ಪರಿಶೀಲನಾ ಸಭೆಗಳಲ್ಲಿ ಈ ವಿಷಯವನ್ನು ಒಮ್ಮೆಯೂ ಪ್ರಸ್ತಾಪಿಸಿರುವುದಿಲ್ಲ. ಹಾಗಾಗಿ ಕಾಮಗಾರಿ ಅನುಷ್ಠಾನಗೊಳಿಸಿದ ಹಾಗೂ ಮೇಲ್ವಿಚಾರಣೆ ನಡೆಸಿದ ಎಲ್ಲಾ ಅಧಿಕಾರಿಗಳು ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ಸಂಪೂರ್ಣವಾಗಿ ವಿಫಲರಾಗಿ ಸರ್ಕಾರಕ್ಕೆ ಬೃಹತ್ ಪ್ರಮಾಣದ ಆರ್ಥಿಕ ನಷ್ಟ ಉಂಟಾಗಲು ಹಾಗೂ ಮಾಡಲಾಗಿರುವ ಸಂಪೂರ್ಣ ವೆಚ್ಚವು ನಿರರ್ಥಕವಾಗಲು ಕಾರಣರಾಗಿರುತ್ತಾರೆ. ಅಲ್ಲದೆ ಲೋಕೋಪಯೋಗಿ ಇಲಾಖೆ ಸಂಹಿತೆ 2014ರ ಸಂಹಿತೆ 1 ಹಾಗೂ ಕೆ.ಪಿ.ಡಬ್ಲ್ಯುಡಿ ಅಕೌಂಟ್ಸ್ ಸಂಹಿತೆಯ ವಿವಿಧ ಕಂಡಿಕೆಗಳಲ್ಲಿ ನಿಗಧಿಪಡಿಸಿರುವ ಜವಾಬ್ದಾರಿಯನ್ನು ನಿಭಾಯಿಸಲು ವಿಫಲರಾಗಿರುತ್ತಾರೆ. ಅಲ್ಲದೆ ಸದರಿಯವರುಗಳು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು, 1966ರ ನಿಯಮ 3(1) ನ್ನು ಉಲ್ಲಂಘಿಸಿ ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ವರ್ತಿಸಿರುವುದು ಸ್ಪಷ್ಟವಾಗಿರುತ್ತದೆ.

ಅಲ್ಲದೆ ಬಾಗಲಕೋಟೆ ಜಿಲ್ಲೆ ಮುಧೋಳ ತಾಲ್ಲೂಕಿನ ನಾಗರಾಳ ಮತ್ತು ಇತರೆ ೦೫ ಗ್ರಾಮಗಳಿಗೆ ಕುಡಿಯುವ ನೀರು ಸರಬರಾಜು ಯೋಜನೆ ಕಾಮಗಾರಿಯನ್ನು ೨೦೦೭-೦೮ ನೇ ಸಾಲಿನಲ್ಲಿ ತಾಂತ್ರಿಕ ಮಂಜೂರಾತಿ ನೀಡಿ ಪ್ರಾರಂಭಿಸಲಾಗಿದೆ. ಸದರಿ ಕಾಮಗಾರಿಯನ್ನು ಪೂರ್ಣಗೊಳಿಸಲು 11 ತಿಂಗಳ ಕಾಲಾವಕಾಶ ನೀಡಿ (ಮಳೆಗಾಲ ಹೊರತುಪಡಿಸಿ) ಕಾರ್ಯಪಾಲಕ ಇಂಜಿನಿಯರ್ ರವರು ದಿ: ೨೫.೦೩.೨೦೦೮ ರಂದು ಗುತ್ತಿಗೆದಾರರೊಂದಿಗೆ ಕರಾರು ಒಪ್ಪಂದ ಮಾಡಿಕೊಂಡಿರುತ್ತಾರೆ. ಸದರಿ ಕಾಮಗಾರಿಯ ನೀರು ಸಂಗ್ರಹಣೆಯ ಸಲುವಾಗಿ ಕೆರೆಗೆ Impounding Reservoir ನಿರ್ಮಿಸಿದ್ದು, ತಳಪಾಯದಲ್ಲಿ ಉಪಯೋಗಿಸಿದ ಕಪ್ಪು ಮಣ್ಣಿಗೆ ಬೇಕಾಗುವ ಸಾಮರ್ಥ್ಯದ ಗುಣಮಟ್ಟ ಪರೀಕ್ಷಿಸಿ ಖಚಿತಪಡಿಸಿಕೊಳ್ಳದೆ ತಳಪಾಯ ಕಾಮಗಾರಿಯನ್ನು ನಿರ್ವಹಿಸಲಾಗಿದೆ. ಕಾಮಗಾರಿಯು ಪ್ರಗತಿಯಲ್ಲಿದ್ದಾಗ ಕಾಮಗಾರಿಯ ಮಣ್ಣಿನ ಗುಣಮಟ್ಟದ ಕೋ ಎಫಿಸೆಂಟ್ ಆಫ್ ಪರ್‌ಮಿಯಾಬಿಲಟಿ (Co-efficient of permeability K test) ಪರೀಕ್ಷೆಯನ್ನು ಬಾಗಲಕೋಟ ಇಂಜನೀಯರಿಂಗ್ ಕಾಲೇಜಿನ ಪ್ರೋ: ಶ್ರೀ ಎಸ್.ಎಫ್.ಚಿತ್ರಗಾರ ಇವರಿಂದ ಮಾಡಲಾಗಿದ್ದು, ಮಣ್ಣಿನ K Value0.675 $X10^{-6}$ಇದ್ದು, ಇದರ Soil drainage condition - Poor ಆಗಿರುತ್ತದೆ. ಆದರೆ ಅವಶ್ಯಕವಾಗಿ ಮಣ್ಣಿನ Co-efficient of permeability (K Value) $1X10^{-7}$ದಿಂದ $1X10^{-9}$ಇದ್ದರೆ ಮಣ್ಣು Practically impervious ಆಗಿರುತ್ತದೆ. ಈ ಅಂಶವನ್ನು ನಿರ್ಲಕ್ಷಿಸಿ (ಇಂಪೌಂಡಿಂಗ್ ರಿಸರ್ವಾಯರ) ಕೆರೆಯ ತಳಪಾಯದ ಕಾಮಗಾರಿಯನ್ನು ನಿರ್ವಹಿಸಿದರಿಂದ ಸಂಗ್ರಹಿಸಲಾದ ನೀರು ಸೋರುವಿಕೆಯಾಗಿದ್ದು, ಕಾಮಗಾರಿಯನ್ನು ಸಮರ್ಪಕವಾಗಿ ನಿರ್ವಹಿಸದೆ ಇರುವುದು ಹಾಗೂ ಹೊಸದಾಗಿ ಸದರಿ ತಳಪಾಯದ ಕಾಮಗಾರಿಯನ್ನು ನಿರ್ವಹಿಸಬೇಕಾದ ಅನಿವಾರ್ಯತೆ ಎದುರಾಗಿರುತ್ತದೆ. ಈ ರೀತಿ ಕಾಮಗಾರಿಯನ್ನು ಅನುಷ್ಠಾನಗೊಳಿಸುವ ಸಂದರ್ಭದಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಕುಡಿಯುವ ನೀರಿನ ಸಂಗ್ರಹಣೆ ಕುರಿತಂತೆ ಸಮರ್ಪಕವಾಗಿ ಪರಿಶೀಲಿಸದೆ ಕಾಮಗಾರಿ ನಿರ್ವಹಿಸದ ಕಾರಣ ಕಾಮಗಾರಿಯನ್ನು ಪೂರ್ಣಗೊಳಿಸಲಾಗಿದ್ದರೂ ಸಹ ಸಂಬಂಧಪಟ್ಟ ಗ್ರಾಮಗಳಿಗೆ ನೀರು ಸರಬರಾಜು ಮಾಡಲು ಸಾಧ್ಯವಾಗಿರುವುದಿಲ್ಲ.

ಮೇಲಿನ ೦೨ ಕಾಮಗಾರಿಗಳ ಬಹುಗ್ರಾಮ ಕುಡಿಯುವ ನೀರು ಸರಬರಾಜು ಕಾಮಗಾರಿಗಳನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸದೆ ಸರ್ಕಾರಕ್ಕೆ ಆರ್ಥಿಕ ನಷ್ಟ ಉಂಟಾಗಲು ಹಾಗೂ ಕಾಮಗಾರಿ ಪೂರ್ಣಗೊಳಿಸಿದ ನಂತರವು ಸಹ ನಿರರ್ಥಕವಾಗಲು ಮೇಲೆ ತಿಳಿಸಿರುವ ಅಧಿಕಾರಿ / ನೌಕರರುಗಳು ಕಾರಣರಾಗಿರುತ್ತಾರೆ. ಸದರಿ ಅಧಿಕಾರಿಗಳ ಪೈಕಿ ಈಗಾಗಲೇ ಸೇವೆಯಿಂದ ನಿವೃತ್ತಿ ಹೊಂದಿರುವ ಅಧಿಕಾರಿಗಳನ್ನು ಹೊರತುಪಡಿಸಿ ಸೇವೆಯಲ್ಲಿರುವ ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ಕೆಲಸ ನಿರ್ವಹಿಸುತ್ತಿರುವ ಅಧಿಕಾರಿ / ನೌಕರರುಗಳನ್ನು ತಕ್ಷಣದಿಂದ ಅನ್ವಯವಾಗುವಂತೆ ಸೇವೆಯಿಂದ ಅಮಾನತ್ತು ಪಡಿಸಲು ಸರ್ಕಾರವು ತೀರ್ಮಾನಿಸಿರುತ್ತದೆ.

ಉಳಿದಂತೆ ಸೇವೆಯಲ್ಲಿರುವ ಹಾಗೂ ಈ ಹಿಂದೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ಕೆಲಸ ನಿರ್ವಹಿಸಿ, ಪ್ರಸ್ತುತ ಇಲಾಖೆಯಲ್ಲಿ ಸೇವೆ ಇರದ ಈ ಕೆಳಕಂಡ ಅಧಿಕಾರಿ / ನೌಕರರುಗಳಿಗೆ ಸಂಬಂಧಿಸಿದಂತೆ ಸೇವೆಯಿಂದ ಅಮಾನತ್ತು ಪಡಿಸಲು ಕ್ರಮವಹಿಸುವಂತೆ ಅವರುಗಳ ಮಾತೃ ಇಲಾಖೆಯನ್ನು ಕೋರಲಾಗಿದೆ:-

1. ಶ್ರೀ ಸುರೇಂದ್ರ ದೊಡ್ಡಮನಿ, ಅಂದಿನ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಮುಧೋಳ (ಪ್ರಸ್ತುತ ಲೋಕೋಪಯೋಗಿ ಇಲಾಖೆ)
2. ಶ್ರೀ ಸಿ.ಬಿ.ಮಿಂಚಿನಾಳ, ಅಂದಿನ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಮುಧೋಳ (ಪ್ರಸ್ತುತ ಲೋಕೋಪಯೋಗಿ ಇಲಾಖೆ)
3. ಶ್ರೀ ಜಿ.ಬಿ.ಕರ್ನಾಳ, ಅಂದಿನ ಕಿರಿಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಮುಧೋಳ (ಪ್ರಸ್ತುತ ಲೋಕೋಪಯೋಗಿ ಇಲಾಖೆ)
4. ಶ್ರೀ ಎನ್.ಸಿ.ಕೊಡಗಲಿ, ಅಂದಿನ ದ್ವಿತೀಯ ದರ್ಜೆ ಲೆಕ್ಕ ಸಹಾಯಕ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬಾಗಲಕೋಟೆ (ಪ್ರಸ್ತುತ ರಾಜ್ಯ ಲೆಕ್ಕ ಪತ್ರ ಇಲಾಖೆ)

ಭಾರತ ಲೆಕ್ಕ ನಿಯಂತ್ರಕರು ಮತ್ತು ಲೆಕ್ಕ ಪರಿಶೋಧಕರು ಸ್ಥಳೀಯ ಸಂಸ್ಥೆಗಳ ಲೆಕ್ಕ ಪರಿಶೋಧನೆ ನಡೆಸಿ ಸಲ್ಲಿಸಿದ ವರದಿಯಲ್ಲಿ ಈ ಅಂಶದ ಕುರಿತು ವರದಿಯ ಕಂಡಿಕೆ 2.3 ಮತ್ತು ಕಂಡಿಕೆ 2.4 ರಲ್ಲಿ ಪ್ರಸ್ತಾಪಿಸಿರುತ್ತಾರೆ. ಅದರಂತೆ ಈ ಆದೇಶ.

<u>ಆದೇಶ ಸಂಖ್ಯೆ. ಗ್ರಾಅಪ 02 ಇಐಕ್ಯೂ 2020, ಬೆಂಗಳೂರು, ದಿನಾಂಕ:18.01.2020</u>

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನಲೆಯಲ್ಲಿ, ಸರ್ಕಾರವು ಬಾಗಲಕೋಟೆ ಪಂ.ರಾ.ಇಂ. ವಿಭಾಗದ ವ್ಯಾಪ್ತಿಯಲ್ಲಿ ಕೈಗೊಳ್ಳಲಾದ (1) ಮುಧೋಳ ತಾಲೂಕಿನ ನಾಗರಾಳ ಹಾಗೂ ಇತರೆ 05 ಗ್ರಾಮಗಳ ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆ ಹಾಗೂ (2) ಬಾಗಲಕೋಟೆ ಜಿಲ್ಲೆ ಮುಧೋಳ ತಾಲೂಕಿನ ಮೆಟಗುಡ್ಡ ಹಾಗೂ ಇತರೆ 07 ಗ್ರಾಮಗಳ ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆಗಳನ್ನು ಸಮರ್ಪಕವಾಗಿ ಅನುಷ್ಠಾನಗೊಳಸದೆ ಗಂಭೀರ ಸ್ವರೂಪದ ಕರ್ತವ್ಯ ಲೋಪ ಮತ್ತು ದುರ್ನಡತೆ ಎಸಗಿ ಆರ್ಥಿಕ ನಷ್ಟಕ್ಕೆ ಗುರಿಯಾಗಿರುವ ಈ ಕೆಳಕಂಡ ಅಧಿಕಾರಿ / ನೌಕರರುಗಳ ವಿರುದ್ಧದ ಶಿಸ್ತು ಕ್ರಮ / ಇಲಾಖಾ ವಿಚಾರಣೆ ಬಾಕಿ ಇರಿಸಿ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 10(1)(ಡಿ) ರನ್ವಯ ತಕ್ಷಣದಿಂದ ಜಾರಿಗೆ ಬರುವಂತೆ ಸೇವೆಯಿಂದ ಅಮಾನತ್ತುಪಡಿಸಿ ಆದೇಶಿಸಿದೆ:-

1. ಶ್ರೀ ಮಂಡೋಲಿ ಮನೋಹರ ಶಂಕರಪ್ಪ, ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಧಾರವಾಡ.
2. ಶ್ರೀ ಎಸ್.ಜಿ.ಬೋಸಲೆ, ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಬಸವನಬಾಗೇವಾಡಿ.
3. ಶ್ರೀ ಎಂ.ಹೆಚ್.ಕರದೇಗೌಡ, ಪ್ರಥಮ ದರ್ಜೆ ಲೆಕ್ಕಸಹಾಯಕ, ತಾಲ್ಲೂಕು ಪಂಚಾಯತ್, ಬಾದಾಮಿ, ಬಾಗಲಕೋಟೆ ಜಿಲ್ಲೆ.

ಮೇಲ್ಕಂಡ ಆಪಾದಿತರುಗಳ ಪೈಕಿ ಕ್ರಮ ಸಂ: 1 ಮತ್ತು 2 ರಲ್ಲಿನ ಅಧಿಕಾರಿಗಳ ಹುದ್ದೆಯ ಹಕ್ಕನ್ನು (ಲೀನ್) ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು ರವರ

ಕಛೇರಿಗೆ ವರ್ಗಾಯಿಸಿದೆ ಮತ್ತು ಕ್ರಮ ಸಂಖ್ಯೆ: 3ರ ನೌಕರರ ಲೀನನ್ನು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಬಾಗಲಕೋಟೆ ಇವರ ಕಛೇರಿಗೆ ವರ್ಗಾಯಿಸಿದೆ.

ಸದರಿಯವರುಗಳು ಅಮಾನತ್ತು ಅವಧಿಯಲ್ಲಿ ನಿಯಮಾನುಸಾರ ಜೀವನಾಧಾರ ಭತ್ಯೆ ಪಡೆಯಲು ಅರ್ಹರಾಗಿರುತ್ತಾರೆ ಹಾಗೂ ಅಮಾನತ್ತಿನ ಅವಧಿಯಲ್ಲಿ ಸಕ್ಷಮ ಪ್ರಾಧಿಕಾರದ ಅನುಮತಿ ಇಲ್ಲದೆ ಅವರು ಕೇಂದ್ರ ಸ್ಥಾನ ಬಿಡತಕ್ಕದಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಎಸ್.ರಂಗನಗೌಡ), 18/01/2020
ಸರ್ಕಾರದ ಅಧೀನ ಕಾರ್ಯದರ್ಶಿ (ಸೇವೆಗಳು-ಎ),
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

1. ಮಹಾಲೇಖಪಾಲರು, (ಅ ಮತ್ತು ಇ) ಕರ್ನಾಟಕ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ.
3. ಆಯುಕ್ತರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಬೆಂಗಳೂರು
4. ಪ್ರಧಾನ ನಿರ್ದೇಶಕರು, ಕರ್ನಾಟಕ ರಾಜ್ಯ ಲೆಕ್ಕ ಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ, ಬೆಂಗಳೂರು.
5. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಧಾರವಾಡ / ಬಾಗಲಕೋಟೆ / ವಿಜಯಪುರ.
6. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು.
7. ಮುಖ್ಯ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಬೆಂಗಳೂರು
8. ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡ (ದಕ್ಷಿಣ), ಕೆ.ಆರ್.ಸರ್ಕಲ್, ಬೆಂಗಳೂರು.
9. ಶ್ರೀ ಮಂದೋಲಿ ಮನೋಹರ ಶಂಕರಪ್ಪ, ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಧಾರವಾಡ.
10. ಶ್ರೀ ಎಸ್.ಜಿ.ಬೋಸಲೆ, ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಬಸವನಬಾಗೇವಾಡಿ.
11. ಶ್ರೀ ಎಂ.ಹೆಚ್.ಕರದೇಗೌಡ, ಪ್ರಥಮ ದರ್ಜೆ ಲೆಕ್ಕ ಸಹಾಯಕ, ತಾಲ್ಲೂಕು ಪಂಚಾಯತ್, ಬಾದಾಮಿ.
12. ಸರ್ಕಾರದ ಅಧೀನ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ, (ಸೇವೆಗಳು-ಎ, ಬಿ & ಸಿ).
13. ಮಾನ್ಯ ಗ್ರಾ..ಅ.ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿಯವರಿಗೆ.
14. ಗ್ರಾ.ಅ.ಪಂ.ರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿ / ಉಪ ಕಾರ್ಯದರ್ಶಿ (ಆಡಳಿತ-1) ಇವರ ಆಪ್ತ ಕಾರ್ಯದರ್ಶಿ/ ಆಪ್ತ ಸಹಾಯಕರಿಗೆ.
15. ಮೇಲ್ವಿಚಾರಕರು, ಗಣಕಯಂತ್ರ ವಿಭಾಗ, ಗ್ರಾ.ಅ.ಪಂ.ರಾಜ್ ಇಲಾಖೆ ಇವರಿಗೆ ವೆಬ್‌ಸೈಟ್‌ನಲ್ಲಿ ಪ್ರಕಟಿಸುವ ಸಲುವಾಗಿ.
16. ಹೆಚ್ಚುವರಿ ಪ್ರತಿ:ರಕ್ಷಾ ಕಡತ